
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಜನವರಿ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 01 ಪ್ರಕಟಣೆ : 09-01-2023


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಅಮೇರಿಕಾದಲ್ಲಿ ನೆಲೆಸಿರುವ ಶ್ರೀ ರಂಜನ್ ಬೆಳ್ಳೆ ಮತ್ತು ಶ್ರೀಮತಿ ಐವಿ ಬೆಳ್ಳೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. **2,00,000/-** (ರೂಪ್ಯಾ ಎರಡು ಲಕ್ಷ) ದೇಣಿಗೆಯನ್ನು ನೀಡಿದರು. ಅವರನ್ನು ಶ್ರೀ ಸಭಾದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಅವರ ಮಾತಾಪಿತರಾದ ಶ್ರೀ ರವೀಂದ್ರನಾಥ್ ಬೆಳ್ಳೆ, ಶ್ರೀಮತಿ ಮಾಲಿನಿ ಬೆಳ್ಳೆ, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು. ಅವರು ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಉಡುಪಿ ನಿವಾಸಿ, ನಿವೃತ್ತ ಕಾರ್ಪೋರೇಷನ್ ಬ್ಯಾಂಕ್ ಜನರಲ್ ಮೆನೇಜರ್ ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾದ ಮಾಜಿ ಅಧ್ಯಕ್ಷರಾದ ಶ್ರೀ ಚಿತ್ಪಾಡಿ ಸರ್ವೋತ್ತಮ ರಾವ್ (C. S. RAO) ತಮ್ಮ ವಿವಾಹ ಸುವರ್ಣಮಹೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಧರ್ಮಪತ್ನಿ ಶ್ರೀಮತಿ ಸುನಂದಾ ರಾವ್, ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀಮತಿ ಶೈಲಜಾ ಶ್ರೀಕಾಂತ್, ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್, ಶ್ರೀಮತಿ ಪ್ರಭಾ ಪ್ರಭಾಕರ್, ಶ್ರೀ ನಾಗರಾಜ್ ವರ್ಕಾಡಿ ಉಪಸ್ಥಿತರಿದ್ದರು.



ಭುವನೇಶ್ವರ ನಿವಾಸಿ ಇಂಜಿನಿಯರ್ ತಂತ್ರಾಡಿ ಶ್ರೀ ಸುಬ್ರಹ್ಮಣ್ಯ ಶಾನುಭೋಗ್ ಮತ್ತು ಶ್ರೀಮತಿ ಗೀತಾ ಶಾನುಭೋಗ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದರು. ಅವರನ್ನು ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಅಭಿನಂದಿಸಿದರು. ಅವರು ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.




ಮಂಗಳೂರು ನಿವಾಸಿ ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರ್ ನಿವೃತ್ತ ಅಧಿಕಾರಿ, ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಫಲಿಮಾರ್ ಶ್ರೀ ಉದಯ ಕುಮಾರ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಧರ್ಮಪತ್ನಿ ಶ್ರೀಮತಿ ಭುವನಾ ರಾವ್, ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೆ., ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರು ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಇನ್ನ ವಿಶ್ವಾಸ್ ರಾವ್ ತಮ್ಮ ತಂದೆ ಇನ್ನ ರಾಜಗೋಪಾಲ್ ಆರ್. ರಾವ್ ಸ್ಮರಣಾರ್ಥ (ನಿವೃತ್ತ ಶಿಕ್ಷಕರು) ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯ 'ಶಿವಸದನ'ಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಮಾತೃಶ್ರೀ ಶ್ರೀಮತಿ ಜಯಲಕ್ಷ್ಮೀ ಆರ್. ರಾವ್, ಧರ್ಮಪತ್ನಿ ಶ್ರೀಮತಿ ರಚಿತಾ ರಾವ್, ಮಗಳು ಕು। ಸ್ನಿಗ್ಧ ರಾವ್, ಸಹೋದರಿ ಶ್ರೀಮತಿ ವಂದನಾ ರಾವ್, ಮಾವ ಶ್ರೀ ಬಿ. ಸುಬ್ರಹ್ಮಣ್ಯ ರಾವ್, ಅತ್ತೆ ಶ್ರೀಮತಿ ಲಲಿತಾ ರಾವ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.

### ಶ್ರೀ ಸುಬ್ರಹ್ಮಣ್ಯ ಸಭಾ (ರಿ.) - ಮನವಿ

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 36ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ. ಶ್ರೀ ಕರುಣ್ ರಾವ್ ಬೆಳ್ಳೆ – 7337634359 ● ಶ್ರೀ ಪಿ. ಶ್ರೀಕಾಂತ್ ರಾವ್ – 7795116598

- ಸೋತವನಿಗೆ ಮಾತ್ರ ಗೆಲ್ಲಲು ಮತ್ತೊಂದು ಅವಕಾಶವಿರುತ್ತದೆ. – ದ. ರಾ. ಬೇಂದ್ರೆ
- ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ತಾವೇ ಕಂಡುಕೊಳ್ಳಬೇಕು. ಧರ್ಮದ ದಾರಿ ಒಂದಲ್ಲ. ಹಲವು.

## ••• ಜ್ಞಾನಶಕ್ತಿ ಮಾಸ ಪತ್ರಿಕೆ •••

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್, ಪುತ್ತೂರು ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್ ಮೊಬೈಲ್ : 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು • ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್


ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618 e-mail : jnanashakthisss@gmail.com


**ಈಜಿಪ್ಟ್‌ನಲ್ಲಿ ನಡೆದ COP 27 ವಿಶ್ವಸಂಸ್ಥೆಯ ಪ್ರಾಯೋಜಿತ ವಿಚಾರಗೋಷ್ಠಿಯಲ್ಲಿ ಭಾರತದ ಏಕಮಾತ್ರ ಪ್ರತಿನಿಧಿಯಾಗಿ ಹೈದರಾಬಾದ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ**



## ಅಂಕಿತ್ ಸುಹಾಸ್ ರಾವ್




ಜಾಗತಿಕ ತಾಪಮಾನದ ಸ್ಥಿತ್ಯಂತರಗಳು ಇಂದು ಸಮಗ್ರ ಜೀವಸಂಕುಲದ ಅಸ್ತಿತ್ವಕ್ಕೇ ಸವಾಲಾಗಿದೆ. ಜೀವರಾಶಿಗಳಲ್ಲಿ ಅತ್ಯಂತ ಬುದ್ಧಿವಂತ ಎಂದುಕೊಂಡಿರುವ ಮನುಷ್ಯನು ಪ್ರಕೃತಿಯನ್ನು ತನಗೆ ಬೇಕಾದಂತೆ ಮಣಿಸಿಕೊಂಡು–ಬಳಸಿಕೊಂಡು ಸುಖವೆಂಬ ಮರೀಚಿಕೆಯ ಬೆನ್ನಹಿಂದೆ ಬಿದ್ದಿದ್ದಾನೆ. ಈ ಪ್ರಕ್ರಿಯೆಯಲ್ಲಿ ಕಾಡು ನಾಶವಾಗುತ್ತಿದೆ, ಭೂಮಿ ಬರಡಾಗುತ್ತಿದೆ, ಸಾಗರ ತಳದಲ್ಲಿ ಪ್ಲಾಸ್ಟಿಕ್‌ನ ಪರ್ವತಗಳು ಬೆಳೆಯುತ್ತಿವೆ, ಮರುಭೂಮಿಯಲ್ಲಿ ಮಳೆ ಸುರಿಯುತ್ತಿದೆ, ಹಿಮಾಲಯದಂತಹ ಪರ್ವತಗಳೇ ಕುಸಿಯುತ್ತಿವೆ, ಸಮುದ್ರದ ಮಟ್ಟ ವರ್ಷಂಪ್ರತಿ ಏರುತ್ತಿದೆ. ಮನುಷ್ಯನ ಸ್ವಯಂಕೃತ ಅಪರಾಧದ ಪರಿಣಾಮವಾಗಿ ತಾಪಮಾನದ ಏರಿಕೆಯಿಂದಾಗಿ ಪ್ರಕೃತಿಯ ಜೀವ ಸರಪಳಿಯ ಕೊಂಡಿಗಳು ಒಂದೊಂದಾಗಿ ಕಳಚಿ ಬೀಳುತ್ತಿವೆ. ಈ ವಿನಾಶದ ಸರಪಳಿಯಲ್ಲಿ ಮುಂದಿನ ಸರದಿ ಬಹುಶಃ ಮಾನವನದು.

ಪ್ರಕೃತಿಯ ರಕ್ಷಣೆಗಾಗಿ ತನ್ಮೂಲಕ ಸಮಗ್ರ ಜೀವಸಂಕುಲದ ಉಳಿವಿಗಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳನ್ನು ಜಾಗೃತಿಗೊಳಿಸಲು ವಿಶ್ವಸಂಸ್ಥೆಯು (UNO) COP 27 ಎಂಬ ಯೋಜನೆಯೊಂದನ್ನು ಹಮ್ಮಿಕೊಂಡಿದೆ. 2022ನೇ ಸಾಲಿನಲ್ಲಿ ಈ ಬಗ್ಗೆ ವಿಚಾರಗೋಷ್ಠಿಯು ಈಜಿಪ್ಟ್‌ನಲ್ಲಿ ಆಯೋಜಿಸಲಾಗಿತ್ತು. ಈ ಗೋಷ್ಠಿಯಲ್ಲಿ **ಅಂಕಿತ್ ಸುಹಾಸ್ ರಾವ್**‌ರವರು ಭಾರತದ ಏಕಮಾತ್ರ ಯುವ ಪರಿಸರವಾದಿಯಾಗಿದ್ದರು.

**ಅಂಕಿತ್ ಸುಹಾಸ್ ರಾವ್‌ರವರು ಹೈದರಾಬಾದ್‌ನ ಪಬ್ಲಿಕ್ ಸ್ಕೂಲ್‌ನಲ್ಲಿ ಪಿ.ಯು.ಸಿ. ವಿದ್ಯಾರ್ಥಿಯಾಗಿದ್ದು, ಮೂಲತಃ ಉಡುಪಿಯ ಕಟಪಾಡಿ, ಮೂಡುಬೆಟ್ಟಿನವರಾಗಿದ್ದ ಸುಹಾಸ್ ಬಿ. ಆರ್. ರಾವ್ ಇವರ ಪುತ್ರರಾಗಿದ್ದು, ಬಿ. ಆರ್. ರಾವ್ ಇವರ ಮೊಮ್ಮಗನಾಗಿರುತ್ತಾರೆ.**

**18 ವರ್ಷದ ಯುವ ಪರಿಸರ ಪ್ರೇಮಿ ಅಂಕಿತ್ ಸುಹಾಸ್ ರಾವ್ ಭಾರತದಿಂದ COP27ಗೆ ಆಹ್ವಾನಿಸಲ್ಪಟ್ಟಿರುವ ಏಕಮಾತ್ರ ಪ್ರತಿನಿಧಿಯಾಗಿರುತ್ತಾರೆ.**

**ನಮ್ಮ ಸಮಾಜಕ್ಕೆ ಗೌರವವನ್ನು ತಂದುಕೊಟ್ಟ ಪ್ರತಿಭಾವಂತ ಪರಿಸರಪ್ರೇಮಿ ಯುವಕನಿಗೆ 'ಜ್ಞಾನಶಕ್ತಿ'ಯು ಶ್ರೇಯಸ್ಸನ್ನು ಹಾರೈಸುತ್ತದೆ.**

## ಬೆಳ್ತಂಗಡಿಯಲ್ಲಿ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ

2023ನೇ ಇಸವಿ, ಮಾರ್ಚ್ ತಿಂಗಳ ನಾಲ್ಕು ಹಾಗೂ ಐದನೇ ತಾರೀಕಿನಂದು ಬೆಳ್ತಂಗಡಿಯ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ನೇತೃತ್ವದಲ್ಲಿ ಹಾಗೂ ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಆಶ್ರಯದಲ್ಲಿ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶವು ವಿಜೃಂಭಣೆಯಿಂದ ನೆರವೇರಲಿದೆ. ಶ್ರೀ ಶೃಂಗೇರಿ ಶಾರದಾಪೀಠದ ಜಗದ್ಗುರುಗಳು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮವಿಭೂಷಣ ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆ ಇವರ ಆಶೀರ್ವಾದ ಹಾಗೂ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ಜರಗಲಿವೆ. ತಮ್ಮೆಲ್ಲರ ತನು–ಮನ–ಧನಗಳ ಸಹಕಾರ ಹಾಗೂ ಭಾಗವಹಿಸುವಿಕೆಯೊಂದಿಗೆ ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಬೆಳ್ತಂಗಡಿ ಸಂಘದ ಪದಾಧಿಕಾರಿಗಳು**


Sri Hari Adyapady
Proprietor

Ph : 0824-2251597 (R)
2252119 (O)
Mobile : 9448344612
9964072489



SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE



We undertake all types of Electrical, Plumbing and Sanitary works


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

### ಸ್ಕೋಲರ್ಸ್ ಡೇ - 2023

**ಭಾನುವಾರ 19, ಫೆಬ್ರವರಿ, 2023**

Scholars Day

ಕಳೆದ 2021-22ನೇ ಸಾಲಿಗೆ 232 ವಿದ್ಯಾರ್ಥಿಗಳಿಗೆ ಒಟ್ಟು ರೂ. 74,67,000-00 (ಎಪ್ಪತ್ತನಾಲ್ಕು ಲಕ್ಷದ ಅರುವತ್ತೇಳು ಸಾವಿರ) ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಈ ಮೊತ್ತದಲ್ಲಿ 177 ವಿದ್ಯಾರ್ಥಿಗಳಿಗೆ ರೂ. 6,57,000-00 ಉಚಿತ ವಿದ್ಯಾರ್ಥಿ ವೇತನ ಹಾಗೂ 55 ವಿದ್ಯಾರ್ಥಿಗಳಿಗೆ ರೂ. 68,10,000-00 ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗಿತ್ತು.

ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾನಿಧಿಯನ್ನು ಈ ಮಟ್ಟಕ್ಕೆ ಬೆಳೆಸುವಲ್ಲಿ ಧನಸಹಾಯ ನೀಡಿದ ಎಲ್ಲಾ ಸಮಾಜ ಬಾಂಧವರಿಗೆ ಕೃತಜ್ಞರಾಗಿದ್ದೇವೆ. 2022-23ರ 'ಸ್ಕೋಲರ್ಸ್ ಡೇ' ಸಮಾರಂಭವು ದಿನಾಂಕ 19-02-2023ನೇ ಭಾನುವಾರದಂದು ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಭವನದಲ್ಲಿ ಜರಗಲಿರುವುದು.

ಮುಖ್ಯ ಅತಿಥಿಯಾಗಿ

**ಶ್ರೀ ಪಿ. ಪ್ರದೀಪ ಕುಮಾರ್**

**ಚೇರ್‌ಮ್ಯಾನ್, ಕರ್ಣಾಟಕ ಬ್ಯಾಂಕ್, ಮಂಗಳೂರು**

ಮತ್ತು ಪ್ರಧಾನ ಭಾಷಣಕಾರರಾಗಿ

**ಡಾ. ಶೋಭಿತಾ ಸತೀಶ್**

**ಪ್ರಾಂಶುಪಾಲರು, ವಿವೇಕಾನಂದ ಕಾಲೇಜ್ ಆಫ್ ಎಜ್ಯುಕೇಶನ್, ಪುತ್ತೂರು**

ಇವರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ತಾವೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಬೇಕಾಗಿಯೂ ಶ್ರೀ ಸಭಾದ ವಿದ್ಯಾನಿಧಿಯನ್ನು ಇನ್ನಷ್ಟು ವೃದ್ಧಿಸುವಲ್ಲಿ ತಮ್ಮ ಉದಾರ ನೆರವನ್ನು ನೀಡಬೇಕಾಗಿಯೂ ಅಪೇಕ್ಷಿಸುತ್ತೇವೆ.

**– ಡಾ। ಎ. ಪಿ. ಕೃಷ್ಣ, ಅಧ್ಯಕ್ಷರು, ವಿದ್ಯಾಭ್ಯಾಸ ಸಮಿತಿ**
**ಉಪಾಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ✆ : 9845213997


Manish Rao U.

Tel : (O) 2223301
Mobile : 9448726499 / 8884284939

NAVA COMPUTERS



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

PREETHIKA AUTOMOBILES

✆ 2493633 9845851573

Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003

Dealers in :
Minda Switches, M. K. Products, Swiss Auto Products, Power Coils

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –

G. K. KOLPE
House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002



Prop. : SUDHAKAR BELLE
✆ : 9845193103/ 9481563103

KARAN DIGITAL STUDIO
Sadasukh Building
Nr. Postoffice, Padubidri - 574 111
Opp. Busstand
Belman



All Marriage & Other functions
Photography & Videography Available




# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಮಂಗಳೂರು ನಿವಾಸಿ ಶ್ರೀಮತಿ ಸ್ನೇಹಲತಾ ಮತ್ತು ಡಾ। ದಿವಾಕರ್ ರಾವ್ ಇವರು ತಮ್ಮ ಹೆತ್ತವರಾದ ಸಾಂತೂರ್ ಜನಾರ್ದನ ರಾವ್ ಮತ್ತು ಶ್ರೀಮತಿ ಜಲಜರವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ ವಿದ್ಯಾನಿಧಿಗೆ ರೂ. 40,000/- ನೀಡಿ ನಿಧಿಯನ್ನು ರೂ. 2,10,000/-ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು ಮತ್ತು ಉಡುಪಿಯ 4 ಎಕರೆ ಸ್ಥಳದಲ್ಲಿ ನಿರ್ಮಾಣವಾಗಲಿರುವ ಶ್ರೀ ಶೃಂಗೇರಿ ಶಂಕರ ಶಾಖಾ ಮಠಕ್ಕೆ ರೂ. 1,00,000/- (ರೂಪ್ಯಾ ಒಂದು ಲಕ್ಷ) ಸಮರ್ಪಿಸಿ ಗುರುಗಳ ಕೃಪೆಗೆ ಪಾತ್ರರಾಗಿದ್ದಾರೆ. ಇವರ ಈ ಪುಣ್ಯ ಕಾರ್ಯಗಳು ಸರ್ವರಿಗೂ ಮಾದರಿಯಾಗಲಿ ಎಂಬುದೇ ನಮ್ಮ ಆಶಯ. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.


(ಚಿತ್ರ : ಶ್ರೀ ರಘುವೀರ್ ಪೆರ್ಡೂರ್)

# ಪುರಿ ಶ್ರೀಗಳಿಗೆ ಶ್ರೀ ಸಭಾದಿಂದ ಗೌರವ ಸಮರ್ಪಣೆ



ಜಗದ್ಗುರು ಶಂಕರಾಚಾರ್ಯ ಪೂರ್ವಾಮ್ನಾಯ ಗೋವರ್ಧನ (ಪುರಿ) ಪೀಠಾಧೀಶ್ವರ ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಸ್ವಾಮೀಜಿ ಇವರು ಮಂಗಳೂರಿಗೆ ಆಗಮಿಸಿದಾಗ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಜಗದ್ಗುರುಗಳಿಗೆ ಫಲ ಸಮರ್ಪಿಸಿ ಪ್ರಸಾದ ಪಡೆಯಲಾಯಿತು. ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೆ., ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ ಕೃತಾರ್ಥರಾದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಜಗದ್ಗುರುಗಳ ಸ್ವಾಗತ, ಮೊಕ್ಕಾಂ, ಕಾರ್ಯಕ್ರಮಗಳ ವ್ಯವಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

# ಸಿ. ಎಸ್. ರಾವ್ ಇವರ 'ಸರ್ವೋತ್ತಮ' ಕೃತಿ ಬಿಡುಗಡೆ



ಉಡುಪಿ ಜಿಲ್ಲಾ ಹಿರಿಯ ನಾಗರಿಕ ಸಂಘದ ಅಧ್ಯಕ್ಷರು, ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಂ. ಶ್ರೀ ಸಿ. ಎಸ್. ರಾವ್‌ರವರು ಬರೆದ ಆತ್ಮಚರಿತ್ರೆ 'ಸರ್ವೋತ್ತಮ' ಕೃತಿಯನ್ನು ಭೋಪಾಲದ ಜಾಗ್ರಣ್ ಲೇಕ್‌ಸಿಟಿ ವಿಶ್ವವಿದ್ಯಾನಿಲಯದ ಉಪಕುಲಪತಿ, ಖ್ಯಾತ ರಾಜಕೀಯ ವಿಶ್ಲೇಷಕ ಡಾ। ಸಂದೀಪ್ ಶಾಸ್ತ್ರಿ ಅವರು ಉಡುಪಿಯ 'ಶ್ರೀ ಶಾರದಾ ಮಂಟಪದ ಸಭಾಂಗಣ'ದಲ್ಲಿ ನಡೆದ ಸಮಾರಂಭದಲ್ಲಿ ಇತ್ತೀಚೆಗೆ ಲೋಕಾರ್ಪಣೆಗೈದರು. ಬ್ರಹ್ಮಾವರ ಎಸ್.ಎಮ್.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ। ವೈ. ರವೀಂದ್ರನಾಥ ರಾವ್ ಕೃತಿ ಪರಿಚಯ ಮಾಡಿದರು. ಲೇಖಕ ಶ್ರೀ ಸಿ. ಎಸ್. ರಾವ್ ಕೃತಿ ರಚನೆಯ ಹಿನ್ನೆಲೆಯನ್ನು ವಿವರಿಸಿದರು. ಉಡುಪಿ ಜಿಲ್ಲಾ ಬಳಕೆದಾರರ ವೇದಿಕೆಯ ಅಧ್ಯಕ್ಷ ಶ್ರೀ ಎ. ಪಿ. ಕೊಡಂಚ ಅಧ್ಯಕ್ಷಸ್ಥಾನ ವಹಿಸಿದರು. ಒಟ್ಟು 160 ಪುಟಗಳ, ಇಂಗ್ಲೀಷ್ ಭಾಷೆಯಲ್ಲಿರುವ ಈ ಕೃತಿಯು ಸಿ. ಎಸ್. ರಾಯರ ಬದುಕಿನ ವೃತ್ತಾಂತ, ವ್ಯಕ್ತಿತ್ವದ ವಿವಿಧ ಆಯಾಮಗಳು, ಕಾರ್ಪೋರೇಶನ್ ಬ್ಯಾಂಕಿನ ಸಾಂಸ್ಥಿಕ ಇತಿಹಾಸ, ಆಗಿನ ಸಮಾಜದ ವ್ಯವಸ್ಥೆಗಳ ವಿಷಯಗಳನ್ನು ಒಳಗೊಂಡಿದ್ದು ಮುಂದಿನ ಜನಾಂಗಕ್ಕೆ ಉಪಯುಕ್ತ ಮಾಹಿತಿ ನೀಡುತ್ತದೆ. ಕು। ಸಿಂಚನಾ ರಾವ್ ಸ್ವಾಗತಿಸಿದರು. ಶ್ರೀ ಸಿದ್ಧಾರ್ಥ ರಾವ್, ಶ್ರೀಮತಿ ಸುಚಿತ್ರಾ ರಾವ್ ಮತ್ತು ಶ್ರೀಮತಿ ಸ್ಮೃತಿ ರಾವ್ ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಸುನಂದಾ ರಾವ್ ಉಪಸ್ಥಿತರಿದ್ದರು. ಶ್ರೀ ಸಂಜಯ ರಾವ್ ವಂದಿಸಿದರು.

# ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ತಮ್ಮ ಪತಿ ಶ್ರೀ ಪಿ. ಪ್ರಭಾಕರ್ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಪದಾಧಿಕಾರಿಗಳಾದ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್ ಉಪಸ್ಥಿತರಿದ್ದರು.

# ಶ್ರೀ ಸುಬ್ರಹ್ಮಣ್ಯ ಸಭಾ ವಾರ್ಷಿಕೋತ್ಸವ ಸ್ಪರ್ಧಾ ವಿಜೇತರು

**ಅಡುಗೆ ಸ್ಪರ್ಧೆ :**

ಸಿಹಿ ವಿಭಾಗ : : I : ಸುನೀಲ ಭುಜಂಗ ರಾವ್ II : ಸರೋಜ ಗಣೇಶ್ ರಾವ್
III : ಸೌಭದ್ರಾ ಶಾಸ್ತ್ರಿ

ಖಾರ ವಿಭಾಗ : I : ಸುನೀಲ ಭುಜಂಗ ರಾವ್ II : ಸೌಭದ್ರಾ ಶಾಸ್ತ್ರಿ
III : ಸರೋಜ ಗಣೇಶ್ ರಾವ್

**ಹೂ ಜೋಡಣಾ ಸ್ಪರ್ಧೆ :** I : ಸೌಭದ್ರಾ ಶಾಸ್ತ್ರಿ

**ರಂಗೋಲಿ ಸ್ಪರ್ಧೆ :** I : ಚೈತ್ರ II : ಪ್ರಣತಿ III : ಸುನೀಲ ಭುಜಂಗ ರಾವ್

## ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಸನ್ನಿಧಾನದಲ್ಲಿ

# ಯೋಗಾಸನ ಪ್ರದರ್ಶನ ಮತ್ತು ಪುಸ್ತಕ ಬಿಡುಗಡೆ



ಡಾ. ನಾಗಭೂಷಣ, ಮುಲ್ಕಿ ಯೋಗಾಸನಗಳ ಬಗ್ಗೆ ಪುಸ್ತಕ ಬರೆಯುವ ಮೊದಲಾಗಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಸನ್ನಿಧಾನದಲ್ಲಿ ಪ್ರದರ್ಶನ ನೀಡಿ ಕೃತಾರ್ಥರಾದರು. ಇದೇ ಸಂದರ್ಭ ಅವರು ರಚಿಸಿ ಅಕ್ಷತಾ ಮೆಲ್ಬೋರ್ನ್ ಹಾಡಿದ, ವೆಂಕಟೇಶ್ ಪರಾರಿ ಸಂಯೋಜಿಸಿ ರಾಜೇಶ್ವರಿ ಪರಾರಿ ರಾಗ ಸಂಯೋಜಿಸಿದ ಅಡಕ ಮುದ್ರಿಕೆ 'ಮೋಹನ ತರಂಗ'ವನ್ನು ಜಗದ್ಗುರುಗಳು ಕೆಲವು ಹಾಡುಗಳನ್ನು ಆಲಿಸಿದ ಬಳಿಕ ಬಿಡುಗಡೆಗೊಳಿಸಿ ಅನುಗ್ರಹಿಸಿದರು.





## ಶುಭ ವಿವಾಹ

ಮಂಗಳೂರಿನ ಶ್ರೀಮತಿ ಬೃಂದಾ ಜೋಶಿ ಮತ್ತು ಶಿರಿಯ ಶ್ರೀ ಹರೀಶ್ ಜೋಶಿಯವರ ಸುಪುತ್ರ **ಚಿ। ಹಿತೇಶ್** ಹಾಗೂ ಹೆಬ್ರಿ ಬೆಳ್ವಗುಂಡಿ ಶ್ರೀರಾಮ ಹೆಬ್ಬಾರರ ಸುಪುತ್ರಿ **ಚಿ। ಸೌ। ಶ್ರೀವಿದ್ಯಾ** ಇವರ ವಿವಾಹ ತಾರೀಕು 30-12-2022ರ ಶುಕ್ರವಾರ ಪರ್ಕಳದ 'ಶ್ರೀ ಸುರಕ್ಷಾ ಸಭಾಭವನ'ದಲ್ಲಿ ನೆರವೇರಿತು.

❖❖❖

ಶ್ರೀಮತಿ ಸುಕನ್ಯಾ ಮತ್ತು ಚಿತ್ರಾಪುರ ಶಶಿಧರ್ ರಾವ್‌ರವರ ಸುಪುತ್ರಿ **ಚಿ। ಸೌ। ಸುಷ್ಮಾ** ಹಾಗೂ ಶ್ರೀಮತಿ ಗೌರಿ ಮತ್ತು ಶ್ರೀ ಚಂದ್ರಶೇಖರ್ ರಾವ್‌ರವರ ಸುಪುತ್ರ **ಚಿ। ಭರತ್**‌ನ ವಿವಾಹ ತಾ. 26-11-2022ರ ಸೋಮವಾರ ಎರ್ಮಾಳು 'ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣ'ದಲ್ಲಿ ಜರುಗಿತು.

❖❖❖

ಮೂಡುಬಿದಿರೆ ಶ್ರೀ ಬೊಕ್ಕಸ ಗಣೇಶ ರಾವ್ ಮತ್ತು ಶ್ರೀಮತಿ ಮಲ್ಲಿಕಾ ರಾವ್ ಇವರ ಪುತ್ರಿ **ಚಿ। ಸೌ। ಮೇಘನಾ** ಹಾಗೂ ಅಡೂರು ಶ್ರೀ ರಾಜಶೇಖರ ರಾವ್ ಮತ್ತು ಶ್ರೀಮತಿ ರಾಧಿಕಾ ರಾವ್ ಇವರ ಪುತ್ರ **ಚಿ। ರಕ್ಷಿತ್** ಇವರ ವಿವಾಹವು ತಾ. 25-12-2022ನೇ ಆದಿತ್ಯವಾರ ಬನ್ನಡ್ಕ ಶ್ರೀಗುರು ರಾಘವೇಂದ್ರ ಮಠದ 'ನಳಿನಾಕ್ಷಿ ಸಭಾಭವನ'ದಲ್ಲಿ ನೆರವೇರಿತು.

❖❖❖

ಶ್ರೀಮತಿ ತಾರಕೇಶ್ವರಿ ಹಾಗೂ ಶ್ರೀ ಮುರಳಿ ಮಣಿಕ್ಕಳ ಇವರ ಜ್ಯೇಷ್ಠ ಪುತ್ರಿ **ಚಿ। ಸೌ। ಕಾವ್ಯ** ಹಾಗೂ ಶ್ರೀಮತಿ ಗೌರಿ ಮತ್ತು ಶ್ರೀ ಜಿ. ದಿವಾಕರ ರಾವ್ ಕಾವೂರು ಇವರ ಪುತ್ರ **ಚಿ। ಸನತ್ ಕುಮಾರ** ಇವರ ಮಂಗಲೋತ್ಸವವು ತಾ. 05–01–2023ನೇ ಗುರುವಾರ ಪುತ್ತೂರು 'ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವನ'ದಲ್ಲಿ ನೆರವೇರಿತು.

❖❖❖

ಶ್ರೀ ಎಂ. ಎಸ್. ನಟರಾಜ್ ಮತ್ತು ಶ್ರೀಮತಿ ಚಂದ್ರಶ್ರೀ ಇವರ ಸುಪುತ್ರ **ಚಿ। ಶರತ್** ಹಾಗೂ ಶ್ರೀ ಯು. ಹರೀಶ್ ಕುಮಾರ್ ಮತ್ತು ಶ್ರೀಮತಿ ಸ್ವರ್ಣ ಇವರ ಸುಪುತ್ರಿ **ಚಿ। ಸೌ। ಚಂದನ** ಇವರ ವಿವಾಹ ತಾ. 9–12–2022ರ ಶುಕ್ರವಾರ ಬೆಂಗಳೂರಿನ ಜೆ. ಪಿ. ನಗರದ 'ಶ್ರೀ ಬಾಲಯೋಗಿ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❖❖❖

ಶ್ರೀಮತಿ ಪದ್ಮಾವತಿ ಮತ್ತು ಮಾರ್ಪಳ್ಳಿ ಶ್ರೀ ಗುರುಪ್ರಸಾದ್ ರಾವ್ ಇವರ ಸುಪುತ್ರಿ **ಚಿ। ಸೌ। ಅನುಜ್ಞಾ** ಹಾಗೂ ಶ್ರೀಮತಿ ಶಾರದಾ ಮತ್ತು ಕಾರಿಂಜ ಪರಾರಿ ಶ್ರೀ ರಾಮ್‌ಪ್ರಸಾದ್ ಇವರ ಸುಪುತ್ರ **ಚಿ। ಅಭಿಜಿತ್** ಇವರ ವಿವಾಹ ತಾ. 14–12–2022ರ ಬುಧವಾರ ಶ್ರೀ ಕ್ಷೇತ್ರ ಧರ್ಮಸ್ಥಳದ 'ಮಹೋತ್ಸವ ಸಭಾಭವನ'ದಲ್ಲಿ ಜರುಗಿತು.

## ಉಪನಯನ



ಶ್ರೀಮತಿ ಸಂಗೀತ ಮತ್ತು ಶ್ರೀ ಚೈತ್ರಕುಮಾರ್‌ರವರ ಸುಪುತ್ರ **ಚಿ। ಅರ್ಜುನ್**‌ನ ಬ್ರಹ್ಮೋಪದೇಶ ತಾರೀಕು 01-01-2023ನೇ ರವಿವಾರ ಉಡುಪಿಯ ಕುಕ್ಕೆಹಳ್ಳಿಯ 'ಕನಸು ಫಾರ್ಮ್ ಹೌಸ್'ನಲ್ಲಿ ನಡೆಯಿತು.

❖❖❖

ಶ್ರೀಮತಿ ದೀಪಾ ಮತ್ತು ಶ್ರೀ ಸುಧಾಕರ ಶರ್ಮ ಬೆಳ್ಳೆ ಇವರ ಸುಪುತ್ರ **ಚಿ। ಅನೀಶ**ನ ಉಪನಯನ ಸಂಸ್ಕಾರವು ದಿನಾಂಕ 08–01–2023ನೇ ರವಿವಾರ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ನೆರವೇರಿಸಲಾಯಿತು.

❖❖❖

ಶ್ರೀಮತಿ ಭಾಗ್ಯಜ್ಯೋತಿ ಮತ್ತು ಶ್ರೀ ಅರವಿಂದ ಇವರ ಸುಪುತ್ರ **ಚಿ। ನೂತನ್**‌ನಿಗೆ ಉಪನಯನ ಸಂಸ್ಕಾರ ಕಾರ್ಯಕ್ರಮವು ತಾರೀಕು 26–12–2022ನೇ ಸೋಮವಾರ ಬಿ.ಸಿ.ರೋಡ್‌ನ 'ತುಳು–ಶಿವಳ್ಳಿ ಸಭಾಭವನ'ದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನಡೆಯಿತು.

❖❖❖

ಶ್ರೀ ರಮೇಶ್ ಎನ್. ರಾವ್ ಮತ್ತು ಶ್ರೀಮತಿ ಶಿಲ್ಪಾ ಇವರ ಸುಪುತ್ರ **ಚಿ। ಅದ್ವಿತ್**‌ನ ಬ್ರಹ್ಮೋಪದೇಶ ತಾರೀಕು 1–01–2023ರ ರವಿವಾರ ಕಾವು 'ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಸಭಾಭವನ'ದಲ್ಲಿ ನೆರವೇರಿತು.

❖❖❖

ಶ್ರೀಮತಿ ರಂಜಿತಾ ಮತ್ತು ಶ್ರೀ ಉಮಾಶಂಕರ ಉಬರಳೆ ಇವರ ಸುಪುತ್ರ **ಚಿ। ಸಧ್ಯೋಜಾತ**ನ ಬ್ರಹ್ಮೋಪದೇಶ ತಾರೀಕು 8–01–2023ರ ರವಿವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ನಡೆಯಿತು.

❖❖❖

ಶ್ರೀಮತಿ ಸುಚಿತ್ರಾ ಮತ್ತು ಶ್ರೀ ಸಂಜಯ್ ರಾವ್ ಇವರ ಸುಪುತ್ರ **ಚಿ। ಸ್ಮಯನ್**‌ನ ಬ್ರಹ್ಮೋಪದೇಶ ತಾರೀಕು 28–12–2022ರ ಬುಧವಾರ ಉಡುಪಿಯ ಶಾರದಾ ಮಂಟಪದಲ್ಲಿ ನಡೆಯಿತು.

❖❖❖

ಶ್ರೀಮತಿ ಸ್ಮೃತಿ ಮತ್ತು ಶ್ರೀ ಸಿದ್ಧಾರ್ಥ ರಾವ್ ಇವರ ಸುಪುತ್ರ **ಚಿ। ಇಲಾನ್**‌ನ ಬ್ರಹ್ಮೋಪದೇಶ ತಾರೀಕು 28–12–2022ನೇ ಬುಧವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.

❖❖❖

ಶ್ರೀ ಎಂ. ಎನ್. ರಾಜಶೇಖರ ಮತ್ತು ಶ್ರೀಮತಿ ರಮ್ಯಾ ಇವರ ಸುಪುತ್ರ **ಚಿ। ಪ್ರತೀಕ್**‌ನ ಬ್ರಹ್ಮೋಪದೇಶ ತಾರೀಕು 26–12–2022ರ ಸೋಮವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ನಡೆಯಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ತಲಪಾಡಿ ಸೀತಾರಾಮಯ್ಯ ಅವರ ಧರ್ಮಪತ್ನಿ **ಶ್ರೀಮತಿ ರತ್ನಾವತಿ** ಕೂಡಬೆಟ್ಟು ಶ್ರೀ ಸದಾಶಿವೇಶ್ವರ ದೇವಸ್ಥಾನದ ಬಳಿಯಿರುವ ಇವರ ಸ್ವಗೃಹದಲ್ಲಿ ತಾ. 08-12-2022ನೇ ಗುರುವಾರ ನಿಧನರಾದರು. ಇವರು ಮೂರು ಗಂಡು ಮತ್ತು ಮೂರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

❊❊❊



ಕಾರ್ಕಳ ಕಬ್ಬಿನಾಲೆ ಮೇಲ್ಮನೆ ದಿ। ಗೋಪಾಲಕೃಷ್ಣ ಹೆಬ್ಬಾರ್ ಇವರ ಪತ್ನಿ **ಶ್ರೀಮತಿ ಸರಸ್ವತಿ ಹೆಬ್ಬಾರ್** (78) ತಾ. 31-12-2022ನೇ ಶನಿವಾರ ನಿಧನ ಹೊಂದಿದರು. ಅವರು ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❊❊❊



**ಬಾರದಕಲ್ಲು ಶ್ರೀ ಮೋಹನ ರಾವ್** (72) ತಾ. 1-1-2023ನೇ ಆದಿತ್ಯವಾರ ಮಂದಾರ್ತಿಯ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



ದಿ। ಇನ್ನ ಹರೀಶ್ಚಂದ್ರ ರಾವ್ ಇವರ ಪತ್ನಿ **ಶ್ರೀಮತಿ ಪದ್ಮಾ ರಾವ್** (80) ತಾ. 1–1–2023ನೇ ರವಿವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಅವರು ಮಗ, ಸೊಸೆ, ಮೊಮ್ಮಕ್ಕಳನ್ನು ಮತ್ತು ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❊❊❊



ವಿಜಯಾ ಬ್ಯಾಂಕ್ ನಿವೃತ್ತ ಅಧಿಕಾರಿ **ಶ್ರೀ ಎನ್. ಪ್ರಭಾಕರ್ ರಾವ್** (73) ತಾ. 2–01–2023ರ ಸೋಮವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳನ್ನು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❊❊❊



**ಹೆರಿಂಜಾಲು ವೆಂಕಟೇಶ ಕನಕ** (67) ಇವರು ತಾ. 4-01-2023ನೇ ಬುಧವಾರ ನಿಧನ ಹೊಂದಿದರು. ಇವರು ಪಾವಂಜೆ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು. ಇವರು ಪತ್ನಿ, ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ

**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**

**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**

**ಕದ್ರಿ, ಮಂಗಳೂರು - 575 003**

# ಶ್ರೀ ಸುಬ್ರಹ್ಮಣ್ಯ ಸಭಾದ ಮಹಾಸಭೆ




ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾ. 25-12-2022ರ ರವಿವಾರ ನಡೆಯಿತು. ಉಪಾಹಾರದ ಬಳಿಕ ಶ್ರೀ ಶಾರದಾಂಬ ಭಜನಾ ಮಂಡಳಿಯ ಸದಸ್ಯರು ಗುರುದೇವತಾ ಮಂಜರಿಯ ಭಜನೆಗಳನ್ನು ಭಕ್ತಿಪೂರ್ವಕವಾಗಿ ಹಾಡಿದರು. ರಂಗೋಲಿ ಸ್ಪರ್ಧೆ, ಹೂ ಜೋಡಣೆ ಸ್ಪರ್ಧೆ, ಅಡುಗೆ ಸ್ಪರ್ಧೆಗಳು ಮುಕ್ತ ವಿಭಾಗದಲ್ಲಿ ನಡೆದವು. ತೀರ್ಪುಗಾರರಾಗಿ ಶ್ರೀಮತಿ ಜಯಂತಿ ವಿನೋದ್ ರಾವ್, ಶ್ರೀ ನಾಗರಾಜ್ ಶರ್ಮ, ಶ್ರೀ ರಘುವೀರ್ ಪೆರ್ಡೂರ್ ಸಹಕರಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಮಹಾಸಭೆ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2021-2022ನೇ ವರ್ಷದ ಆಡಳಿತ ವರದಿಯನ್ನು, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಅದೇ ವರ್ಷದ ಪರಿಶೋಧಿತ ಲೆಕ್ಕಪತ್ರ ಮತ್ತು ಆಡಿಟ್ ವರದಿಗಳನ್ನು ಮಂಡಿಸಿದರು. ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ಸಮಾಧಾನಕರ ಉತ್ತರಗಳನ್ನು ನೀಡಿ ಅನುಮೋದನೆ ಪಡೆಯಲಾಯಿತು. CA ನಾಗರಾಜ್ ಶರ್ಮ ಇವರನ್ನು ಮುಂದಿನ ಸಾಲಿನ ಲೆಕ್ಕಪರಿಶೋಧಕರಾಗಿ ನೇಮಕ ಮಾಡಲಾಯಿತು. ಶ್ರೀ ಅನಿಲ್ ರಾವ್ ಬಿ. ಎಸ್. ಇವರ ಧನ್ಯವಾದದೊಂದಿಗೆ ಮಹಾಸಭೆ ಮುಕ್ತಾಯವಾಯಿತು. ಭೋಜನದ ಬಳಿಕ ಸಾವಯವ ಕೃಷಿಕ ಗ್ರಾಹಕ ಬಳಗದ ಶ್ರೀಮತಿ ಸುಮಂಗಲಾ ಇವರು ಕೈತೋಟ ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕು। ಅಂಕಿತಾಶ್ರೀ, ಶ್ರೀಮತಿ ಸೌಜನ್ಯ, ಕು। ಸಮನ್ವಿತಾ ಭಟ್‌ರವರ ನೃತ್ಯ ಪ್ರದರ್ಶನ, ಮಾಸ್ಟರ್ ಅಭಿನವ್‌ನ ವಾಯಿಲಿನ್ ವಾದನ ಬಳಿಕ ಶ್ರೀ ಶ್ರೀರಾಂ ಎಲ್ಲಂಗಳ ನಿರ್ದೇಶನದಲ್ಲಿ 'ಎಂಕಮ್ಮ ವಿಜಯ' ಹಾಸ್ಯ ಯಕ್ಷಗಾನ ಪ್ರದರ್ಶನ ನಡೆಯಿತು. ಬಹುಮಾನಗಳನ್ನು ಶ್ರೀಮತಿ ಪ್ರಭಾ ಪ್ರಭಾಕರ್ ರಾವ್ ಪ್ರಾಯೋಜಿಸಿದರು. ಕಾರ್ಯಕ್ರಮವನ್ನು ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿ, ಶ್ರೀಮತಿ ಪುಷ್ಪಾ ಶ್ರೀನಿವಾಸ್ ಧನ್ಯವಾದ ನೀಡಿದರು. ವ್ಯವಸ್ಥೆಗಳಲ್ಲಿ ಯುವ ವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಪದಾಧಿಕಾರಿಗಳಾದ ಶ್ರೀಮತಿ ಭುವನಾ ನಾಗರಾಜ್, ಶ್ರೀ ಸುರೇಶ್ ಕಡಬ, ಶ್ರೀ ಸಾಯಿಪ್ರಸಾದ್ ಸಹಕರಿಸಿದರು. ಬಹುಮಾನ ವಿತರಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರ : **ಶ್ರೀ ರಘುವೀರ್ ಪೆರ್ಡೂರು**

ಪತ್ರಿಕೆಗೆ ಶುಭ ಬಯಸುವ–
**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ೊಲ, ಬಿ.ಎ., ಎಲ್‌ಎಲ್.ಬಿ.**
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
*Authorised Dealers for :*
**Vijai Super GP 150 &**
**Vikram 3 Wheelers (Petrol & Diesel)**


## ಎಬಿಎಸ್‌ಬಿಎಸ್ ವಾರ್ಷಿಕ ಸಭೆ ನೂತನ ಕಾರ್ಯಕಾರಿ ಸಮಿತಿಗೆ ಅವಿರೋಧ ಆಯ್ಕೆ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು ಇದರ ವಾರ್ಷಿಕ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ಚುನಾವಣೆ ತಾ. 18–12–2022ನೇ ಭಾನುವಾರ 'ಜ್ಞಾನಶಕ್ತಿ ಮಂಟಪ'ದಲ್ಲಿ ನಡೆಯಿತು.

ಸಭಾದ ನೂತನ ಲೆಕ್ಕಪರಿಶೋಧಕರಾಗಿ ಆಯ್ಕೆಯಾದ ಶ್ರೀ ಬಿ. ಕೆ. ಪ್ರಭಾತ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಖಜಾಂಚಿ ಶ್ರೀ ಸುಬ್ರಹ್ಮಣ್ಯ ರಾವ್ ಮಾರ್ಚ್‌ಗೆ ಅಂತ್ಯಗೊಂಡ 2021–22ನೇ ವರ್ಷದ ಹಣಕಾಸು ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡರು.

ಚುನಾವಣಾಧಿಕಾರಿ ಅಜ್ಜಾವರ ಶ್ರೀ ಶಿವ ರಾವ್ ಅವಿರೋಧವಾಗಿ ಆಯ್ಕೆಯಾದ ಸಭಾದ ನೂತನ ಕಾರ್ಯಕಾರಿ ಸಮಿತಿಯನ್ನು ಪ್ರಕಟಿಸಿದರು. ಅಧ್ಯಕ್ಷರಾಗಿ ಶ್ರೀ ರವೀಂದ್ರನಾಥ ಬೆಳ್ಳೆ, ಉಪಾಧ್ಯಕ್ಷರಾಗಿ ಶ್ರೀ ಭಾಗ್ಯಚಂದ್ರ ರಾವ್, ಕಾರ್ಯದರ್ಶಿಯಾಗಿ ಶ್ರೀ ಹರೀಶ್ ಮಾರ್ಪಳ್ಳಿ, ಜಂಟಿ ಕಾರ್ಯದರ್ಶಿಯಾಗಿ ಶ್ರೀ ಚಂದ್ರಶೇಖರ್ ರಾವ್, ಖಜಾಂಚಿಯಾಗಿ ಶ್ರೀ ಜಗದೀಶ್ ರಾವ್ ಆಯ್ಕೆಯಾದರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀ ಎ. ರಾಜೇಶ್ ರಾವ್, ಶ್ರೀ ಸಿ. ಆರ್. ಸುಬ್ರಹ್ಮಣ್ಯ ರಾವ್, ಶ್ರೀ ಶಶಿಕಾಂತ್ ರಾವ್, ಶ್ರೀ ರಮೇಶ್ ರಾವ್, ಶ್ರೀ ಶ್ರೀಶಾಂತ್ ರಾವ್, ಶ್ರೀ ಮುರಳೀಧರ ಜೋಯಿಸ್, ಶ್ರೀ ಅಶ್ವಥ್ ಸಂಪಾಜೆ, ಶ್ರೀಮತಿ ಮಾಲತಿ ಸುಬ್ರಹ್ಮಣ್ಯ ರಾವ್, ಶ್ರೀ ಪ್ರಕಾಶ್ ರಾವ್ ಕಡಬ, ಶ್ರೀ ಸಂತೋಷ್ ರಾವ್ ಕಡಬ ಆಯ್ಕೆಯಾದರು.

## ಮಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ ಥಂಡರ್ಕಿಡ್ಸ್ ಮಕ್ಕಳ ವಾದ್ಯಗೋಷ್ಠಿ ತಂಡದವರಿಂದ ಅಮೋಘ ರಸಮಂಜರಿ ಕಾರ್ಯಕ್ರಮ



ದಿನಾಂಕ 27-11-2022ನೇ ಭಾನುವಾರ ಸಾಯಂಕಾಲ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಎಲ್ಲೂರು ಶ್ರೀನಿವಾಸ ರಾಯರ ನೇತೃತ್ವದಲ್ಲಿ ಥಂಡರ್ಕಿಡ್ಸ್ ಮಕ್ಕಳ ವಾದ್ಯಗೋಷ್ಠಿ ತಂಡದವರಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು. ವಾದ್ಯಗೋಷ್ಠಿ ಉದ್ಘಾಟಕರಾಗಿ ಶ್ರೀಮತಿ ವೇಣು ಮರೋಳಿ, ಮುಖ್ಯ ಅತಿಥಿಗಳಾಗಿ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಮಹಿಳಾ ವೇದಿಕೆ ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಚೆಂಡುಕಳ ಗಣೇಶ್ ರಾವ್ ಇವರ ಉಪಸ್ಥಿತಿಯಲ್ಲಿ ನಡೆಯಿತು.

ಥಂಡರ್ಕಿಡ್ಸ್ ಎನ್ನುವುದು ಎಲ್ಲೂರು ರಾಮಕೃಷ್ಣ ರಾವ್ ಶಿಕ್ಷಣ, ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ಗೆ ಸಂಯೋಜಿತವಾಗಿರುವ ಎಲ್ಲಾ ಮಕ್ಕಳ ಆರ್ಕೆಸ್ಟ್ರಾ ಆಗಿದ್ದು ನಮ್ಮೊಂದಿಗೆ ವಿವಿಧ ವಯೋಮಾನದ ಸಮುದಾಯದ ಮಕ್ಕಳು ಪ್ರದರ್ಶನ ನೀಡುತ್ತಾರೆ.

ವರದಿ : **ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ✆ : 9739155359**

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

## ಶ್ರೀ ಶಾರದಾಂಬ ಭಜನಾ ಮಂಡಳಿ – ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಸದಸ್ಯರಿಂದ ಶೃಂಗೇರಿ ಶ್ರೀ ಶಾರದಾಂಬ ಸನ್ನಿಧಿಯಲ್ಲಿ ಧನುರ್ಮಾಸದಲ್ಲಿ ಶೃಂಗೇರಿ ಪದ್ಧತಿಯ ಭಜನಾ ಸಂಕೀರ್ತನ ಕಾರ್ಯಕ್ರಮ



ದಿನಾಂಕ 19-12-2022ರಂದು ಶೃಂಗೇರಿಯಲ್ಲಿ ಭಜನಾ ಸಂಕೀರ್ತನ ಕಾರ್ಯಕ್ರಮ ಶ್ರೀ ಶಾರದಾಂಬ ಭಜನಾ ಮಂಡಳಿ, ಮಂಗಳೂರು ತಂಡದಿಂದ ಗುರುಗಳಾದ ಶ್ರೀಯುತ ಸುಬ್ಬ ರಾವ್ ಪೊಳಲಿ ಹಾಗೂ ಶ್ರೀಯುತ ಕೃಷ್ಣರಾಜ ರಾವ್ ಇವರಿಂದ ತರಬೇತಿ ಪಡೆದ ಭಜನಾ ಸದಸ್ಯರು ಶ್ರೀ ಶಾರದಾಂಬ ಸನ್ನಿಧಿ, ಶ್ರೀ ಭವಾನೀ ಮಲಹಾನಿಕರೇಶ್ವರ ಸನ್ನಿಧಿ, ಶ್ರೀ ಶಂಕರಾಚಾರ್ಯ ಸನ್ನಿಧಿ, ಗುರು ಸನ್ನಿಧಿ, ಶಾರದಾಂಬ ಸನ್ನಿಧಿಯಿಂದ ಗುರುಭವನದ ವರೆಗೆ ನಗರ ಭಜನಾಸಂಕೀರ್ತನೆಯನ್ನು ನಡೆಸಿಕೊಟ್ಟರು. ಇವರೊಂದಿಗೆ ಸುರತ್ಕಲ್, ಪಾವಂಜೆ, ಶಕ್ತಿನಗರದ ಭಜನಾ ಮಂಡಳಿಯವರು ಜತೆಗೂಡಿ ಭಜನಾ ಸಂಕೀರ್ತನ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಹಾರ್ಮೋನಿಯಂನಲ್ಲಿ ಶ್ರೀಯುತ ಕೃಷ್ಣರಾಜ ರಾವ್ ಹಾಗೂ ತಬಲದಲ್ಲಿ ಶ್ರೀಯುತ ಹರಿನಾರಾಯಣ ರಾವ್ ಸಹಕರಿಸಿದರು.

ಶ್ರೀ ಶಾರದಾಮಾತೆಯನ್ನು ಕಣ್ತುಂಬ ನೋಡಿ ಉಭಯ ಜಗದ್ಗುರುವರ್ಯರಿಂದ ಫಲಮಂತ್ರಾಕ್ಷತೆ ಆಶೀರ್ವಾದ ಪಡೆದು ಸದಸ್ಯರು ಧನ್ಯತಾಭಾವದೊಂದಿಗೆ ಮಂಗಳೂರಿಗೆ ಹಿಂದಿರುಗಿದರು.



## ಕೋಲ್ಪೆ ದಿ| ವಿಠಲ ರಾವ್
### ಪರಿಚಯ

**ಜನನ : 30–12–1952 ❖ ನಿಧನ : 17–12–2022**

**ವಿಳಾಸ : 'ಆಶ್ರಯ', ಕೋಲ್ಪೆ ಕಂಪೌಂಡ್**
**ತೆಳ್ಳಾರು ರಸ್ತೆ, ಕಾರ್ಕಳ**

**ತಂದೆ :** ಆಯುರ್ವೇದ ಪಂಡಿತ ಕೋಲ್ಪೆ ಕೊಡಂಗೆ ವೆಂಕಟ್ರಮಣಯ್ಯ (ಪುತ್ತೂರು ತಾಲೂಕು)

**ತಾಯಿ :** ಭಾಗೀರಥಿಯಮ್ಮ (ಪೊಳಲಿ ಮೂಲ)

**ವಿದ್ಯಾಭ್ಯಾಸ :** ಪ್ರಾಥಮಿಕ ಶಿಕ್ಷಣ ಕೋಲ್ಪೆ ಸಮೀಪದ ಶಾಲೆಯಲ್ಲಿ

ತಂದೆಯವರ ಕಾಲಾನಂತರ ಕಾರ್ಕಳ ಜೋಗುಳಬೆಟ್ಟಿಗೆ ತಾಯಿ, ಅಣ್ಣ, ತಮ್ಮ, ತಂಗಿಯರೊಂದಿಗೆ ಆಗಮನ – ವಾಸ.

**ಧರ್ಮಪತ್ನಿ :** ಸೌ| ಆಶಾ, ಕಬ್ಬಿನಾಲೆ ಕೃಷ್ಣಯ್ಯ ಹೆಬ್ಬಾರರ ಪುತ್ರಿ.

**ಮಕ್ಕಳು :** ಎರಡು ಹೆಣ್ಣು. ಯೋಗ್ಯ ಮನೆತನಕ್ಕೆ ಸೇರಿಸಿದ್ದಾರೆ.

**ವ್ಯಕ್ತಿತ್ವ :** ಧೈರ್ಯವಂತ, ನಿಷ್ಠುರವಾದಿ, ಮಾತಲ್ಲಿ ಮೋಡಿ ಮಾಡಬಲ್ಲ, ಸಾರ್ವಜನಿಕ ಸಹಕಾರಿ.

**ಆಸಕ್ತಿ :** ಕೃಷಿ, ರೇಷ್ಮೆ, ರಬ್ಬರ್ ಬೆಳೆ – ತೆಂಗು, ಕಂಗು, ಬಾಳೆ ಇತ್ಯಾದಿ.

ಕೃಷಿ ಕೈ ಹಿಡಿಯದ ಕಾರಣ ಸರಕು ಸಾಗಣೆಗೆ ಮಿನಿ ಟೆಂಪೋ, ಆಮೇಲೆ ಆಟೋರಿಕ್ಷಾ ಚಾಲನೆಗೆ ಆಸಕ್ತಿ ತೋರಿಸಿದರು. ಕಾರ್ಕಳ ಪೇಟೆಯ ತೆಳ್ಳಾರು ರಸ್ತೆಯ (ಶ್ರೀ ರಾಘವೇಂದ್ರ ಮಠದ ಪಕ್ಕ) ಬಳಿ ಮನೆ ಮಾಡಿ, ಗೂಡಂಗಡಿ ವ್ಯಾಪಾರ ಪ್ರಾರಂಭ ಮಾಡಿದರು ಇದ್ಯಾವುದೂ ಮನಸ್ಸಿಗೆ ಹಿತವಾಗದೆ ಒಬ್ಬ ಸಾಧು ಸಂತನಿಂದ ತಂತ್ರ–ಮಂತ್ರ ಕಲಿತು ಸಾಧನೆ ಮಾಡಿ, ಬಯಸಿ ಬಂದವರಿಗೆ ಪರಿಹಾರ ಹೇಳುತ್ತಾ, ಅವರು ಕೊಟ್ಟಷ್ಟು ಸಂಭಾವನೆ ಸ್ವೀಕರಿಸಿ ಹೆಸರುವಾಸಿಯಾದರು.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ವಿವಿಧ ಕ್ಷೇತ್ರಗಳಲ್ಲಿ ಕೈಯಾಡಿಸಿ ಅಸೌಖ್ಯದಿಂದ ತಾ. 17–12–2022ರಂದು ಭಗವತ್ಪಾದ ಸೇರಿ ನಮ್ಮನ್ನೆಲ್ಲಾ ಅಗಲಿ ನಡೆದೇಬಿಟ್ಟರು. ಅಂತಿಮಕ್ರಿಯಾ ದಿನದಂದು, ಅವರ ಬಗ್ಗೆ ಊರ ಮಹನೀಯರು 'ಇಂತಹ ನಿಷ್ಠುರವಾದಿ, ಧೈರ್ಯಶಾಲಿ, ಶ್ರಮಜೀವಿ, ಸಹಕಾರ ಮನೋಭಾವದ ಗುಣ ಹೊಂದಿರುವ ದಿ| ವಿಠಲ ರಾಯರು ಸದಾ ನೆನಪಿನಲ್ಲಿರುತ್ತಾರೆ' ಎಂದು ಅವರ ಗುಣಗಾನ ಮಾಡಿದ್ದು ವಿಶೇಷವಾಗಿತ್ತು. *ಅಗಲಿದ ವಿಠಲನಿಗೆ ನಮ್ಮೆಲ್ಲರ ಚರಮಾಂಜಲಿ.*

***ವರದಿ : ಜಿ. ಕೆ. ಕೋಲ್ಪೆ, ಉಡುಪಿ***

# ಶ್ರೀ ಸುಬ್ರಹ್ಮಣ್ಯ ಸಭಾ ವಾರ್ಷಿಕೋತ್ಸವದ ಕಾರ್ಯಕ್ರಮಗಳು


ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರ್



















**ಯಕ್ಷಗಾನ : 'ಎಂಕಮ್ಮ ವಿಜಯ' - ಕಲಾವಿದರು**

**ಹಿಮ್ಮೇಳ :**

ಭಾಗವತರು : ಶ್ರೀಮತಿ ಮಮತಾ ರಾವ್, ವಾಮಂಜೂರ್
ಚೆಂಡೆ : ಶ್ರೀ ಶಿಶಿರ್, ವಾಮಂಜೂರ್
ಮದ್ದಳೆ : ಶ್ರೀ ಸಂಜಯ್ ಕುಮಾರ್ ಪಿ.

**ಮುಮ್ಮೇಳ :**

ಶ್ರೀರಾಮ್ ಎಲ್ಲಂಗಳ (ಎಂಕಮ್ಮ), ಶ್ರೀ ರಘುವೀರ್ ಪೆರ್ಡೂರ್ (ಪುಳ್ಳಿ)
ಶ್ರೀ ಪ್ರತೀಕ್ ಎಲ್ಲಂಗಳ (ಮಗ), ಶ್ರೀ ಪಿ. ಶ್ರೀಕಾಂತ್ ರಾವ್ (ಕಳ್ಳ)
ಶ್ರೀ ಸೋಮಶೇಖರನ್ (ಮಂಚ), ಶ್ರೀ ನಾಗರಾಜ್ ಶರ್ಮ (ಕೆಂಚ)

**ಕೈತೋಟ ಕೃಷಿ ಮಾಹಿತಿ : ಶ್ರೀಮತಿ ಸುಮಂಗಲಾ** (ಸಾವಯವ ಗ್ರಾಹಕ ಬಳಗದ ಸದಸ್ಯೆ)

**ಸಾಂಸ್ಕೃತಿಕ ಕಾರ್ಯಕ್ರಮ : ವೈಯಕ್ತಿಕ ನೃತ್ಯ :** ಕು। ಅಂಕಿತಾಶ್ರೀ, ಕು। ಸಮನ್ವಿತಾ ಭಟ್ ಮತ್ತು ಶ್ರೀಮತಿ ಸೌಜನ್ಯ **ವಯಲಿನ್ ವಾದನ :** ಮಾ। ಅಭಿನವ್




**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ




ಮಂಗಳೂರು ಚಿಲಿಂಬಿ ನಿವಾಸಿ ಶ್ರೀಮತಿ ಮಮತಾ ರಾವ್ ತಮ್ಮ ತಂದೆ ಶ್ರೀ ಐ. ಕೆ. ಜಗದೀಶ್ಚಂದ್ರರವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. **50,000/-** ದೇಣಿಗೆಯನ್ನು ನೀಡಿದರು. ಅವರನ್ನು ಶ್ರೀ ಸಭಾದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಅವರ ಪತಿ MRPLನ ನಿರ್ದೇಶಕ ಶ್ರೀ ಬಿ.ಎಚ್.ವಿ. ಪ್ರಸಾದ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರು ಉಪಸ್ಥಿತರಿದ್ದರು. ಅವರು ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್

ಬೈಂದೂರಿನ ಶ್ರೀ ಪಿ. ಶೇಷಪ್ಪಯ್ಯ ಮತ್ತು ಶ್ರೀಮತಿ ನಿರ್ಮಲಾ ದೇವಿ ದಂಪತಿಗಳು ತಮ್ಮ 55ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **55,000/-** ದೇಣಿಗೆಯನ್ನು ನೀಡಿದರು. ಅವರು ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.







3,4,5 & 6 BHK Luxury homes at the heart of Mangalore

**Live the vacation life!**

Bookings open now

**8882 777 444**

SHIVABAGH
KADRI

Land Trades®
BUILDERS & DEVELOPERS
BUILDING TRUST,DELIVERING VALUE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*